DIAGEO
INDIA

United Spirits Limited

Registered Office:
UB Tower
#24, Vittal Mallya Road,
Bengaluru 560 001

Tel: +91 80 2221 0705
Fax: +91 80 2224 5253
www.diageoindia.com

24th January 2024

BSE Limited
Listing Department
Dalal Street,
Mumbai 400 001
Scrip Code: 532432

National Stock Exchange of India Limited
Exchange Plaza, C-1 Block G,
Bandra Kurla Complex,
Bandra East, Mumbai- 400051
Scrip Code: MCDOWELL-N

Dear Sirs,

**Sub: Newspaper publication- Unaudited financial results for the quarter ended 31st December 2023**

In accordance with the captioned subject, copies of the newspaper advertisement published today in 'Business Standard' and 'Prajavani' are enclosed.

This is for your information and records.

Thank you,

For United Spirits Limited

MITAL ARVIND SANGHVI
Digitally signed by MITAL ARVIND SANGHVI
Date: 2024.01.24 15:49:59 +05'30'

Mital Sanghvi
Company Secretary

Encl: as above

ಕರ್ತವ್ಯದ ಅವಧಿಯಲ್ಲಿ ಕ್ರಿಕೆಟ್ ಪಂದ್ಯಾವಳಿಯಲ್ಲಿ ಭಾಗಿ

# ತಪ್ಪೊಪ್ಪಿಕೊಂಡ ಅಧಿಕಾರಿಗಳು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕರ್ತವ್ಯದ ಅವಧಿಯಲ್ಲಿ ಕ್ರಿಕೆಟ್ ಪಂದ್ಯಾವಳಿಯಲ್ಲಿ ಭಾಗಿಯಾಗಿದ್ದ ಯಲಹಂಕ ತಾಲ್ಲೂಕು ಕಚೇರಿಯ 38 ಅಧಿಕಾರಿಗಳು, ಸಿಬ್ಬಂದಿ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ಎದುರು ತಪ್ಪೊಪ್ಪಿಕೊಂಡಿದ್ದಾರೆ.

ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಒಂಬತ್ತು ತಾಲ್ಲೂಕು ಕಚೇರಿಗಳಲ್ಲಿ ಲೋಕಾಯುಕ್ತದ ಪೊಲೀಸ್ ಹಾಗೂ ನ್ಯಾಯಾಂಗ ವಿಭಾಗಗಳ ಅಧಿಕಾರಿಗಳು ಶನಿವಾರ ದಿಢೀರ್ ತಪಾಸಣೆ ನಡೆಸಿದ್ದರು. ಯಲಹಂಕ ತಾಲ್ಲೂಕು ಕಚೇರಿಯ 54 ಅಧಿಕಾರಿಗಳು, ಸಿಬ್ಬಂದಿ ಪೈಕಿ 38 ಮಂದಿ ಕಚೇರಿಯಲ್ಲಿರಲಿಲ್ಲ.

ಕ್ರಿಕೆಟ್ ಪಂದ್ಯಾವಳಿಯಲ್ಲಿ ಭಾಗವಹಿಸಲು ಅನುಮತಿ ಕೋರಿ 38 ಜನರು ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಸಿರುವ ಪಟ್ಟಿ ತನಿಖಾ ತಂಡಕ್ಕೆ ಸಿಕ್ಕಿತ್ತು. ಈ ಆಧಾರದಲ್ಲಿ ಸೋಮವಾರ ಲೋಕಾಯುಕ್ತರ ಎದುರು ವಿಚಾರಣೆಗೆ ಹಾಜರಾಗುವಂತೆ ಎಲ್ಲರಿಗೂ ಸೂಚಿಸಲಾಗಿತ್ತು.

'ಕೆಲಸದ ಅವಧಿಯಲ್ಲಿ ಕ್ರಿಕೆಟ್ ಪಂದ್ಯಾವಳಿಯಲ್ಲಿ ಭಾಗವಹಿಸಲು ತಹಶೀಲ್ದಾರ್ ಒಪ್ಪಿಗೆ ನೀಡಿದ್ದರು ಎಂಬುದಾಗಿ 38 ಮಂದಿ ಹೇಳಿದರು. ಆದರೆ, ತಹಶೀಲ್ದಾರ್ ಅದನ್ನು ನಿರಾಕರಿಸಿದರು. ಬಳಿಕ 38 ಮಂದಿಯೂ ತಪ್ಪೊಪ್ಪಿಕೊಂಡರು' ಎಂದು ಲೋಕಾಯುಕ್ತರು 'ಪ್ರಜಾವಾಣಿ'ಗೆ ತಿಳಿಸಿದರು.

**ವರದಿ ಸಲ್ಲಿಸಲು ಸೂಚನೆ:** ಈ 38 ಅಧಿಕಾರಿಗಳು, ನೌಕರರು ಎರಡು ತಿಂಗಳ ಅವಧಿಯಲ್ಲಿ ವಿಲೇವಾರಿ ಮಾಡಿರುವ ಕಡತಗಳು, ಅರ್ಜಿಗಳು, ಸ್ಥಳ ತಪಾಸಣೆ ಸೇರಿದಂತೆ ಅವರ ಕೆಲಸದ ಕುರಿತು ವರದಿ ಸಲ್ಲಿಸುವಂತೆ ತಹಶೀಲ್ದಾರ್‌ಗೆ ಸೂಚನೆ ನೀಡಲಾಗಿದೆ. ಕಡತಗಳನ್ನು ಬಾಕಿ ಇರಿಸಿಕೊಂಡಿರುವ ಕುರಿತೂ ಸಂಬಂಧಿಸಿದ ಅಧಿಕಾರಿ, ನೌಕರರು ವಿವರಣೆ ಸಲ್ಲಿಸುವಂತೆ ಸೂಚಿಸಲಾಗಿದೆ ಎಂದರು.

### ತಹಶೀಲ್ದಾರ್‌ಗೆ ಎಚ್ಚರಿಕೆ

ಲೋಕಾಯುಕ್ತದ ಅಧಿಕಾರಿಗಳ ತಂಡ ದಿಢೀರ್ ತಪಾಸಣೆ ನಡೆಸಿದಾಗ ಕಚೇರಿಯಿಂದ ದೂರವಿದ್ದ ಬೆಂಗಳೂರು ಉತ್ತರ ತಾಲ್ಲೂಕಿನ ತಹಶೀಲ್ದಾರ್ ವಿಜಯಕುಮಾರ್ ಕೂಡ ಸೋಮವಾರ ವಿಚಾರಣೆಗೆ ಹಾಜರಾಗಿದ್ದರು.

'ಹೈಕೋರ್ಟ್ ಪ್ರಕರಣವೊಂದರ ಸಂಬಂಧ ಚರ್ಚಿಸಲು ವಕೀಲರ ಬಳಿ ಇದ್ದ ಕಾರಣ ದೂರವಾಣಿ ಕರೆ ಸ್ವೀಕರಿಸಿಲ್ಲ ಎಂದು ತಹಶೀಲ್ದಾರ್ ಸಮಜಾಯಿಷಿ ನೀಡಿದರು. ಎರಡು ತಿಂಗಳ ಅವಧಿಯ ಕೆಲಸಗಳ ಕುರಿತು ವರದಿ ಸಲ್ಲಿಸುವಂತೆ ಅವರಿಗೂ ಸೂಚಿಸಿದ್ದೇನೆ' ಎಂದು ಲೋಕಾಯುಕ್ತರು ತಿಳಿಸಿದರು.

# ಗಣರಾಜ್ಯೋತ್ಸವಕ್ಕೆ ವಂಡರ್ ಲಾ ರಿಯಾಯಿತಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಗಣರಾಜ್ಯೋತ್ಸವದ ಅಂಗವಾಗಿ ವಂಡರ್‌ಲಾ ಹಾಲಿಡೇಸ್ ಸಂಸ್ಥೆ ತನ್ನ ಪಾರ್ಕ್‌ಗೆ ಮುಂಗಡ ಟಿಕೆಟ್ ಕಾಯ್ದಿರಿಸುವವರಿಗೆ ರಿಯಾಯಿತಿ ಕೊಡಗೆಯನ್ನು ಪ್ರಕಟಿಸಿದೆ.

ಜನವರಿ 26ರಿಂದ 28ರವರೆಗೆ ಪಾರ್ಕ್‌ಗೆ ಪ್ರವೇಶಿಸಲು ₹999ರ ದರದಲ್ಲಿ ಮುಂಗಡ ಟಿಕೆಟ್ ಕಾಯ್ದಿರಿಸಬಹುದು. ಇದಲ್ಲದೆ, 'ವಂಡರ್ ವುಮೆನ್' ಕೊಡುಗೆಯಲ್ಲಿ ಪ್ರತಿ ಬುಧವಾರದಂದು ಮಹಿಳೆಯರು 'ಎರಡು ಟಿಕೆಟ್ ಖರೀದಿಸಿದರೆ, 2 ಟಿಕೆಟ್ ಅನ್ನು ಉಚಿತವಾಗಿ ಪಡೆಯಲಿದ್ದಾರೆ'. ಮೂರು ದಿನ ಮೊದಲು ಮುಂಗಡವಾಗಿ ಟಿಕೆಟ್ ಕಾಯ್ದಿರಿಸಿದರೆ ಶೇ 10ರಷ್ಟು ರಿಯಾಯಿತಿಯನ್ನೂ ಪಡೆಯಬಹುದು. ಈ ಕೊಡುಗೆಗಳು ಆನ್‌ಲೈನ್‌ನಲ್ಲಿ ಮಾತ್ರ ಲಭ್ಯವಿದೆ ಎಂದು ಪ್ರಕಟಣೆ ತಿಳಿಸಿದೆ. ಮುಂಗಡ ಟಿಕೆಟ್ ಬುಕ್ಕಿಂಗ್‌ಗಾಗಿ https://bookings.wonderla.com/ ಇಲ್ಲಿಗೆ ಭೇಟಿ ನೀಡಬಹುದು.



ರಾಜರಾಜೇಶ್ವರಿ ನಗರದ ಚನ್ನಸಂದ್ರದಲ್ಲಿ ವೀರಾಂಜನೆಯ ಸ್ವಾಮಿ ದೇವಸ್ಥಾನದ ಮಹಾದ್ವಾರವನ್ನು ಆದಿಚುಂಚನಗಿರಿ ಮಠದ ವಿಜಯನಗರ ಶಾಖಾ ಮಠದ ಸೌಮ್ಯನಾಥ ಸ್ವಾಮೀಜಿ ಉದ್ಘಾಟಿಸಿದರು. ತಮಿಳುನಾಡು ಆದಿಚುಂಚನಗಿರಿ ವಿದ್ಯಾಸಂಸ್ಥೆಗಳ ಕಾರ್ಯದರ್ಶಿ ಬಿ.ಟಿ. ರಾಮಚಂದ್ರ ಹಾಗೂ ಗಂಗಮ್ಮ ನರಸಿಂಹಯ್ಯ ಭಾಗವಹಿಸಿದ್ದರು.

# ನ್ಯಾಯಯಾತ್ರೆಗೆ ಅಡ್ಡಿ: ಕಾಂಗ್ರೆಸ್ ಆಕ್ರೋಶ

## ಬಿಜೆಪಿ ಗೊಡ್ಡು ಬೆದರಿಕೆಗೆ ಕಾಂಗ್ರೆಸ್ ಹೆದರಲ್ಲ: ಡಿ.ಕೆ.ಶಿವಕುಮಾರ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ನೇತೃತ್ವದಲ್ಲಿ ನಡೆಯುತ್ತಿರುವ 'ಭಾರತ್ ಜೊಡೊ ನ್ಯಾಯಯಾತ್ರೆ'ಗೆ ತಡೆ ಒಡ್ಡಿದ ಕ್ರಮ ಖಂಡಿಸಿ, ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ- (ಕೆಪಿಸಿಸಿ) ಅಧ್ಯಕ್ಷ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ಇಲ್ಲಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಅಸ್ಸಾಂ ಪೊಲೀಸರ ಕ್ರಮ ಖಂಡಿಸಿ ಘೋಷಣೆ ಕೂಗಲಾಯಿತು. ಬಿಜೆಪಿ ಕಾರ್ಯಕರ್ತರಿಂದ ನ್ಯಾಯಯಾತ್ರೆ ಹತ್ತಿಕ್ಕುವ ಪ್ರಯತ್ನಗಳು ನಡೆಯುತ್ತಿವೆ ಎಂದು ಪ್ರತಿಭಟನಕಾರರು ಆಕ್ರೋಶ ಹೊರಹಾಕಿದರು.

ಡಿ.ಕೆ.ಶಿವಕುಮಾರ್ ಮಾತನಾಡಿ, 'ಬಿಜೆಪಿ ಗೂಂಡಾಗಳು ಕೈಯಲ್ಲಿ ಮಂತ್ರಾಕ್ಷತೆ ಹಿಡಿದಿದ್ದರೆ, ಬಗಲಲ್ಲಿ ದೊಣ್ಣೆ ಹಿಡಿದಿದ್ದಾರೆ. ಅವರ ಗೊಡ್ಡು ಬೆದರಿಕೆಗೆ ಕಾಂಗ್ರೆಸ್ ಯಾವಾಗಲೂ ಹೆದರುವುದಿಲ್ಲ' ಎಂದು ಎಚ್ಚರಿಸಿದರು.

'ದೇಶದಲ್ಲಿ ಸಂವಿಧಾನ, ಪ್ರಜಾಪ್ರಭುತ್ವ ವ್ಯವಸ್ಥೆ ಬದುಕಿದೆಯೋ ಸತ್ತಿದೆಯೋ ಎಂಬ ಪ್ರಶ್ನೆ ಉದ್ಭವಿಸಿದೆ. ನ್ಯಾಯಯಾತ್ರೆಯಿಂದ ಬಿಜೆಪಿ ನಾಯಕರಿಗೆ ನಡುಕ ಆರಂಭವಾಗಿದೆ. ಹೀಗಾಗಿ, ನ್ಯಾಯಯಾತ್ರೆ ತಡೆಯುತ್ತಿದ್ದಾರೆ' ಎಂದು ಹೇಳಿದರು.



'ಭಾರತ್ ಜೊಡೊ ನ್ಯಾಯಯಾತ್ರೆ'ಗೆ ತಡೆಯೊಡ್ಡಿದ ಕ್ರಮ ಖಂಡಿಸಿ, ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು. – ಪ್ರಜಾವಾಣಿ ಚಿತ್ರ

'ದೇಶದ ಏಕತೆ, ಸಮಗ್ರತೆ ಹಾಗೂ ಶಾಂತಿಗಾಗಿ ಸಾವಿರಾರು ಕಾಂಗ್ರೆಸ್ ನಾಯಕರು ಪ್ರಾಣತ್ಯಾಗ ಮಾಡಿದ್ದಾರೆ. ಬಿಜೆಪಿ ಒಬ್ಬ ನಾಯಕ ಇಂತಹ ತ್ಯಾಗ ಮಾಡಿದ್ದಾರೆಯೇ' ಎಂದು ಪ್ರಶ್ನಿಸಿದರು.

'ದೇಶದಲ್ಲಿ ಶಾಂತಿ ಹಾಗೂ ಉತ್ತಮ ವಾತಾವರಣ ಮೂಡಿಸಲು ರಾಹುಲ್ ಗಾಂಧಿ ಅವರು ಯಾತ್ರೆ ನಡೆಸುತ್ತಿದ್ದಾರೆ. ಯಾತ್ರೆಯಲ್ಲಿ ಗಲಾಟೆ, ಕಿರುಚಾಟ ಇಲ್ಲ. ಆದರೆ, ಯಾತ್ರೆಯನ್ನು ಉದ್ದೇಶಪೂರ್ವಕವಾಗಿ ತಡೆದು ಗೊಂದಲ ಸೃಷ್ಟಿಸುತ್ತಿದ್ದಾರೆ' ಎಂದು ಗೃಹ ಸಚಿವ ಜಿ.ಪರಮೇಶ್ವರ ವಾಗ್ದಾಳಿ ನಡೆಸಿದರು.

ಸಚಿವ ಕೃಷ್ಣ ಬೈರೇಗೌಡ ಮಾತನಾಡಿ, 'ಬಿಜೆಪಿ ಪ್ರಜಾಪ್ರಭುತ್ವದ ವಿರೋಧಿ ನೀತಿ ಅನುಸರಿಸುತ್ತಿದೆ. ಬಿಜೆಪಿಯ ಪ್ರಾಯೋಜಿತ ಗೂಂಡಾಗಳು ನ್ಯಾಯಯಾತ್ರೆ ತಡೆಯಲು ಮುಂದಾಗಿದ್ದಾರೆ' ಎಂದು ವಾಗ್ದಾಳಿ ನಡೆಸಿದರು.

ಪ್ರತಿಭಟನೆಯಲ್ಲಿ ಸಚಿವ ಕೆ.ಜೆ. ಜಾರ್ಜ್, ವಿಧಾನ ಪರಿಷತ್ ಸದಸ್ಯರಾದ ಬಿ.ಕೆ.ಹರಿಪ್ರಸಾದ್, ಸಲೀಂ ಅಹಮದ್, ಯು.ಬಿ.ವೆಂಕಟೇಶ್, ಮುಖಂಡರಾದ ಎಚ್.ನಾಗೇಶ್, ನಾರಾಯಣಸ್ವಾಮಿ, ಮಹಿಳಾ ಘಟಕದ ರಾಜ್ಯ ಅಧ್ಯಕ್ಷೆ ಪುಷ್ಪಾ ಅಮರನಾಥ್ ಪಾಲ್ಗೊಂಡಿದ್ದರು.

### 'ಶ್ರೀರಾಮ ಬಿಜೆಪಿಗರ ಆಸ್ತಿ ಅಲ್ಲ'

'ರಾಮ ಯಾರ ಮನೆ ಆಸ್ತಿಯೂ ಅಲ್ಲ. ಅವರು ನಮ್ಮನ್ನು ಹಿಂದೂ ವಿರೋಧಿ ಎಂದು ಬಿಂಬಿಸಲು ಟೀಕೆ ಮಾಡುತ್ತಿದ್ದಾರೆ' ಎಂದು ಡಿ.ಕೆ.ಶಿವಕುಮಾರ್ ಆಕ್ರೋಶ ಹೊರಹಾಕಿದರು.

'ಅಯೋಧ್ಯೆಯಲ್ಲಿ ಬಾಲರಾಮನ ಮೂರ್ತಿ ಪ್ರತಿಷ್ಠಾಪನೆ ಅಂಗವಾಗಿ ಧಾರ್ಮಿಕ ದತ್ತಿ ಇಲಾಖೆ ಮೂಲಕ ರಾಜ್ಯದ ಎಲ್ಲ ದೇವಾಲಯಗಳಲ್ಲಿ ವಿಶೇಷ ಪೂಜೆ ಹಮ್ಮಿಕೊಳ್ಳಲಾಗಿತ್ತು. ಇದನ್ನು ಸಹಿಸಲು ಬಿಜೆಪಿಗೆ ಆಗುತ್ತಿಲ್ಲ' ಎಂದು ಹೇಳಿದರು.

'ಬಿಜೆಪಿಯವರು ಧರ್ಮವನ್ನು ರಾಜಕಾರಣಕ್ಕೆ ಬಳಸಿಕೊಳ್ಳುತ್ತಿದ್ದರೂ ನಾವು ಹೆಚ್ಚು ಚರ್ಚೆ ಮಾಡುತ್ತಿಲ್ಲ. ಸಿದ್ದರಾಮಯ್ಯ ಅವರ ಹೆಸರಲ್ಲಿ 'ರಾಮ', ಶಿವಕುಮಾರ ಹೆಸರಲ್ಲಿ 'ಶಿವ' ಹಾಗೂ 'ಷಣ್ಮುಗ', ಹರಿಪ್ರಸಾದ್ ಅವರ ಹೆಸರಲ್ಲಿ 'ಹರಿ' ಇದ್ದಾನೆ. ಕೃಷ್ಣ ಬೈರೇಗೌಡರ ಹೆಸರಲ್ಲಿ 'ಕೃಷ್ಣ' ಇದ್ದಾನೆ. ಹಿಂದೂ ಧರ್ಮ ನಿಮ್ಮ ಮನೆ ಆಸ್ತಿಯೇ' ಎಂದು ಪ್ರಶ್ನಿಸಿದರು.

# ನಾರಾಯಣ ಗುರುಗಳ ವಕೀಲರ ಸಂಘಕ್ಕೆ ಆಯ್ಕೆ

ಪ್ರಜಾವಾಣಿ ವಾರ್ತೆ



ಎ.ಕೆ.ವಸಂತ

**ಬೆಂಗಳೂರು:** 'ಕರ್ನಾಟಕ ರಾಜ್ಯ ನಾರಾಯಣ ಗುರುಗಳ ವಕೀಲರ ಸಂಘ'ದ ನೂತನ ಅಧ್ಯಕ್ಷರಾಗಿ ಹೈಕೋರ್ಟ್‌ನ ಹಿರಿಯ ವಕೀಲ ಎ.ಕೆ.ವಸಂತ ಆಯ್ಕೆಯಾಗಿದ್ದಾರೆ.

'ಕರ್ನಾಟಕ ಆರ್ಯ ಈಡಿಗ ಸಂಘದ ಕಟ್ಟಡದಲ್ಲಿ ಇತ್ತೀಚೆಗೆ ನಡೆದ ಸರ್ವ ಸದಸ್ಯರ ಸಭೆಯಲ್ಲಿ ನೂತನ ಕಾರ್ಯಕಾರಿ ಸಮಿತಿಯನ್ನು ರಚಿಸಲಾಗಿದ್ದು, ಪ್ರಧಾನ ಕಾರ್ಯದರ್ಶಿಯಾಗಿ ಎಚ್.ವಿ.ಕುಮಾರಸ್ವಾಮಿ, ಖಜಾಂಚಿಯಾಗಿ ಕೆ.ಎನ್. ಲೋಕೇಶ್ ಹಾಗೂ ಗೌರವಾಧ್ಯಕ್ಷರಾಗಿ ಎ.ನಾಗಾರಾಜಪ್ಪ ಮತ್ತು ತಾರಾನಾಥ ಪೂಜಾರಿ ಆಯ್ಕೆಯಾಗಿದ್ದಾರೆ' ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಆಯ್ಕೆಯ ನಂತರ ನೂತನ ಅಧ್ಯಕ್ಷ ಎ.ಕೆ.ವಸಂತ ಅವರು ಮಾತನಾಡಿ, 'ನೂತನ ಕಾರ್ಯಕಾರಿ ಸಮಿತಿಯಲ್ಲಿ ಯುವ ವಕೀಲರಿಗೆ ಹೆಚ್ಚಿನ ಜವಾಬ್ದಾರಿ ನೀಡಲಾಗಿದೆ. ರಾಜ್ಯದಾದ್ಯಂತ ಸಂಚರಿಸಿ ಸಮುದಾಯದ ವಕೀಲ ಸಂಘಟನೆಯ ಮೂಲಕ ಯುವ ವಕೀಲರಿಗೆ ಹಿರಿಯ ವಕೀಲರಿಂದ ಸೂಕ್ತ ಮಾರ್ಗದರ್ಶನ ಮತ್ತು ತರಬೇತಿ ನೀಡಲಾಗುವುದು. ಹೊಸದಾಗಿ ನೋಂದಣಿ ಆದ ವಕೀಲರಿಗೆ, ಅನಾರೋಗ್ಯ ಹಾಗೂ ಸಂಕಷ್ಟದಲ್ಲಿರುವ ವಕೀಲರಿಗೆ ಸಹಾಯ ಮಾಡಲು ಸಂಘದಿಂದ ಸಮೂಹ ನಿಧಿ ಸ್ಥಾಪಿಸುವ ಉದ್ದೇಶ ಹೊಂದಲಾಗಿದೆ' ಎಂದರು.

### ಮೈಸೂರು ರೇಸ್

## ಲ್ಯಾಂಡ್ ಆಫ್ ಗೋಲ್ಡ್ ಗೆಲ್ಲುವ ನಿರೀಕ್ಷೆ

ಡಾ| ಈಶ್ವರಿ ಜಿ.ಕೆ ಬಾಲಕೃಷ್ಣನ್ ಮೆಮೋರಿಯಲ್ ಟ್ರೋಫಿ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಲ್ಯಾಂಡ್ ಆಫ್ ಗೋಲ್ಡ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಹರೆಮ್ 10, ಬಾಕಸ್ 9, ಸಿಟಿ ಆಫ್ ಹಸ್ಲ್ 8
2ನೇ ರೇಸ್: ಜರ್ಕಾವಿ 7, ಆಬುಶನ್ 1, ಟೆಂಪರೆನ್ಸ್ 6
3ನೇ ರೇಸ್: ರನ್ನಿಂಗ್ ಬೋಲ್ಟ್ 3, ಸಿಯೊಲ್‌ಫಾರ್ ಬುಲೆಟ್ 1, ದಿ ಥರ್ಟೀನ್ ಟ್ವೆಲ್ಸ್ 2
4ನೇ ರೇಸ್: ಐ ಕ್ಯಾನ್ 5, ಲಕ್ಕಿ ಪಾಯಿಂಟ್ 4, ಕ್ಯಾಲಿಫೋರ್ನಿಯಾ ಗೋಲ್ಡ್ 15
5ನೇ ರೇಸ್: ಲ್ಯಾಂಡ್ ಆಫ್ ಗೋಲ್ಡ್ 11, ಗ್ರ್ಯಾಮ 7, ಹ್ಯಾವಲಾಕ್ ಕ್ರ್ಯಾಝ್ 3
6ನೇ ರೇಸ್: ಮ್ಯಾಜಿಕ್ ಸರ್ಕಲ್ 9, ಎಡ್ಡಿ ದಿ ಈಗಲ್ 4, ಡಲ್ಲಾಸ್ 7
7ನೇ ರೇಸ್: ಕೇಸರಿ ಕ್ವೀನ್ 5, ಮೇಬ್ಯೂರಿ 2, ಎನ್.ಆರ್.ಐ ಮಿಲ್ಲೇನಿಯಮ್ 6

**ಉತ್ತಮ ಬೆಟ್: ರನ್ನಿಂಗ್ ಬೋಲ್ಟ್**

| ಜಾಕ್‌ಪಾಟ್ | 1ನೇ ಟ್ರಿಬಲ್ | 2ನೇ ಟ್ರಿಬಲ್ |
|---|---|---|
| 3,4,5,6,7 | 2,3,4 | 5,6,7 |

ಸುಧಾ, ಮಯೂರ ಓದಿರಿ

# 28ಕ್ಕೆ ಪರೀಕ್ಷೆ

**ಬೆಂಗಳೂರು:** ಸಶಸ್ತ್ರ ಪೊಲೀಸ್ ಕಾನ್‌ಸ್ಟೆಬಲ್ (ಸಿಎಆರ್/ ಡಿಎಆರ್) (ಪುರುಷ) 3,064 ಹುದ್ದೆಗಳ ನೇಮಕಾತಿಗಾಗಿ ಜ.28ರಂದು ನಗರದ 78 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ. ಅಂದು ಬೆಳಿಗ್ಗೆ 11ರಿಂದ ಮಧ್ಯಾಹ್ನ 12.30ರ ವರೆಗೆ ಪರೀಕ್ಷೆ ನಡೆಯಲಿದೆ.

42,740 ಅಭ್ಯರ್ಥಿಗಳಿಗಾಗಿ ಲಿಖಿತ ಪರೀಕ್ಷೆ ನಡೆಯಲಿದೆ ಎಂದು ಪೊಲೀಸ್ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ. ಅಭ್ಯರ್ಥಿಗಳು ಅರ್ಧ ತೋಳಿನ ಅಂಗಿಯನ್ನು ಕಡ್ಡಾಯವಾಗಿ ಧರಿಸಬೇಕು. ಜಿಪ್ ಪ್ಯಾಕೆಟ್‌ಗಳು, ದೊಡ್ಡ ಬಟನ್‌ಗಳು ಇರುವ ಅಂಗಿಗಳನ್ನು ಧರಿಸಿ ಬರಲು ಅವಕಾಶ ಇಲ್ಲ. ಕೇಂದ್ರದ ಒಳಕ್ಕೆ ಶೂ ನಿಷೇಧಿಸಲಾಗಿದ್ದು, ಅಭ್ಯರ್ಥಿಗಳು ತೆಳುವಾದ ಅಡಿಭಾಗವಿರುವ ಚಪ್ಪಲಿ ಧರಿಸಿ ಬರಬೇಕು ಎಂದು ಸೂಚಿಸಲಾಗಿದೆ.

# ಕುನೊ: 3 ಮರಿಗಳಿಗೆ ಜನ್ಮ ನೀಡಿದ ನಮೀಬಿಯಾ ಚೀತಾ

**ಭೋಪಾಲ್/ನವದೆಹಲಿ (ಪಿಟಿಐ):** ನಮೀಬಿಯಾದಿಂದ ತಂದಿದ್ದ ಚೀತಾವೊಂದು ಮಧ್ಯಪ್ರದೇಶದ ಕುನೊ ರಾಷ್ಟ್ರೀಯ ಉದ್ಯಾನದಲ್ಲಿ 3 ಮರಿಗಳಿಗೆ ಜನ್ಮ ನೀಡಿದೆ.

ಕೇಂದ್ರ ಪರಿಸರ ಸಚಿವ ಭೂಪೇಂದರ್ ಯಾದವ್ ಅವರು ಈ ವಿಷಯವನ್ನು 'ಎಕ್ಸ್' ಮೂಲಕ ಮಂಗಳವಾರ ತಿಳಿಸಿದ್ದಾರೆ. 'ಕುನೊಗೆ ಹೊಸ ಚೀತಾ ಮರಿಗಳ ಆಗಮನ! ನಮೀಬಿಯಾದಿಂದ ತಂದಿದ್ದ 'ಜ್ವಾಲಾ' ಹೆಸರಿನ ಚೀತಾವು ಮೂರು ಮರಿಗಳಿಗೆ ಜನ್ಮ ನೀಡಿದೆ. ಇದಕ್ಕೂ ಮುನ್ನ 'ಆಶಾ' ಹೆಸರಿನ ಚೀತಾವು ಮೂರು ಮರಿಗಳಿಗೆ ಜನ್ಮ ನೀಡಿತ್ತು. ವನ್ಯಜೀವಿಗಳ ಉಳಿವಿಗೆ ಶ್ರಮಿಸುತ್ತಿರುವ ಸಿಬ್ಬಂದಿ ಮತ್ತು ವನ್ಯಜೀವಿ ಪ್ರೇಮಿಗಳಿಗೆ ಅಭಿನಂದನೆಗಳು' ಎಂದು ಹೇಳಿದ್ದಾರೆ.

'ಜ್ವಾಲಾ' ಚೀತಾವು ಜ.20ರಂದು ಈ ಮರಿಗಳಿಗೆ ಜನ್ಮ ನೀಡಿದೆ. ಕಳೆದ ವರ್ಷ ಮಾರ್ಚ್‌ನಲ್ಲಿ ಇದೇ ಚೀತಾ 4 ಮರಿಗಳಿಗೆ ಜನ್ಮ ನೀಡಿತ್ತು. ಈ ಪೈಕಿ 1 ಮರಿ ಮಾತ್ರ ಉಳಿದುಕೊಂಡಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.






## ಯುನೈಟೆಡ್ ಸ್ಪಿರಿಟ್ಸ್ ಲಿಮಿಟೆಡ್

DIAGEO INDIA

ನೋಂದಾಯಿತ ಕಛೇರಿ: 'ಯುಬಿ ಟವರ್', # 24, ವಿಠ್ಠಲ್ ಮಲ್ಯ ರಸ್ತೆ, ಬೆಂಗಳೂರು - 560 001.
ಫೋನ್: +91 80 4544 8000, 2221 0705; ಫ್ಯಾಕ್ಸ್: +91 80 3985 6862
ಇಮೇಲ್: contactus.India@diageo.com ವೆಬ್‌ಸೈಟ್: www.diageoindia.com
ಕಾರ್ಪೋರೇಟ್ ಐಡೆಂಟಿಟಿ ನಂಬರ್: L01551KA1999PLC024991

### ಡಿಸೆಂಬರ್ 31, 2023ಕ್ಕೆ ಅಂತ್ಯವಾದ ತ್ರೈಮಾಸಿಕ ಮತ್ತು ಒಂಬತ್ತು ತಿಂಗಳುಗಳಿಗೆ ಪ್ರತ್ಯೇಕಿತ ಮತ್ತು ಕ್ರೋಢೀಕೃತ ಪರಿಶೋಧಿಸದಿರುವ ಆರ್ಥಿಕ ಫಲಿತಾಂಶಗಳ ವಿವರಣೆ

(ಐಎನ್‌ಆರ್ ದಶಲಕ್ಷಗಳಲ್ಲಿ, ಪ್ರತಿ ಷೇರಿನ ಡೇಟಾದ ಆದಾಯವನ್ನು ಹೊರತುಪಡಿಸಿ)

| ಕ್ರ. ಸಂಖ್ಯೆ | ವಿವರಗಳು | ಪ್ರತ್ಯೇಕಿತ | | | ಕ್ರೋಢೀಕೃತ | | |
|---|---|---|---|---|---|---|---|
| | | ಡಿಸೆಂಬರ್ 31, 2023ಕ್ಕೆ ಕೊನೆಗೊಂಡ ತ್ರೈಮಾಸಿಕ | ಡಿಸೆಂಬರ್ 31, 2023ಕ್ಕೆ ಕೊನೆಗೊಂಡ 9 ತಿಂಗಳುಗಳಿಗೆ | ಡಿಸೆಂಬರ್ 31, 2022ಕ್ಕೆ ಕೊನೆಗೊಂಡ ತ್ರೈಮಾಸಿಕ | ಡಿಸೆಂಬರ್ 31, 2023ಕ್ಕೆ ಕೊನೆಗೊಂಡ ತ್ರೈಮಾಸಿಕ | ಡಿಸೆಂಬರ್ 31, 2023ಕ್ಕೆ ಕೊನೆಗೊಂಡ 9 ತಿಂಗಳುಗಳಿಗೆ | ಡಿಸೆಂಬರ್ 31, 2022ಕ್ಕೆ ಕೊನೆಗೊಂಡ ತ್ರೈಮಾಸಿಕ |
| | | ಪರಿಶೋಧಿಸದಿರುವ | ಪರಿಶೋಧಿಸದಿರುವ | ಪರಿಶೋಧಿಸದಿರುವ | ಪರಿಶೋಧಿಸದಿರುವ | ಪರಿಶೋಧಿಸದಿರುವ | ಪರಿಶೋಧಿಸದಿರುವ |
| 1. | ಕಾರ್ಯಾಚರಣೆಗಳಿಂದ ಒಟ್ಟು ಆದಾಯ | 69,492 | 189,955 | 66,122 | 69,620 | 195,069 | 66,098 |
| 2. | ಅವಧಿಗೆ ನಿವ್ವಳ ಲಾಭ (ಅಸಾಧಾರಣ ವಸ್ತುಗಳು ಮತ್ತು ತೆರಿಗೆಯ ಮೊದಲು) | 4,583 | 12,124 | 3,031 | 4,593 | 15,303 | 3,038 |
| 3. | ತೆರಿಗೆಗೆ ಮುಂಚಿನ ಅವಧಿಯ ನಿವ್ವಳ ಲಾಭ (ಅಸಾಧಾರಣ ವಸ್ತುಗಳ ನಂತರ) | 4,583 | 12,260 | 1,520 | 4,593 | 15,439 | 1,551 |
| 4. | ತೆರಿಗೆಯ ನಂತರದ ಅವಧಿಗೆ ನಿವ್ವಳ ಲಾಭ (ಅಸಾಧಾರಣ ವಸ್ತುಗಳ ನಂತರ) | 3,481 | 9,276 | 1,105 | 3,502 | 11,662 | 2,142 |
| 5. | ಅವಧಿಯ ಒಟ್ಟು ಸಮಗ್ರ ಆದಾಯ | 3,481 | 9,226 | 1,105 | 3,532 | 11,642 | 2,200 |
| 6. | ಈಕ್ವಿಟಿ ಷೇರು ಬಂಡವಾಳ | 1,455 | 1,455 | 1,455 | 1,455 | 1,455 | 1,453 |
| 7. | ಇತರ ಈಕ್ವಿಟಿ | 64,311 | 64,311 | 55,965 | 67,253 | 67,253 | 57,562 |
| 8. | ಗಳಿಕೆ/ (ನಷ್ಟ) ಪ್ರತಿ ಷೇರಿಗೆ (INR 2/- ಪ್ರತಿ) [ಕೆಳಗೆ ಟಿಪ್ಪಣಿ (ಬಿ) ಗಮನಿಸಿ] ಮೂಲ ಮತ್ತು ದುರ್ಬಲ (INR ಗಳಲ್ಲಿ) | 4.79 | 12.75 | 1.52 | 4.93 | 16.42 | 3.02 |

ಟಿಪ್ಪಣಿಗಳು

ಎ) ಮೇಲಿನದು 2015ರ ಸೆಕ್ಯೂರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ ನಿಯಂತ್ರಣಗಳ (ಪಟ್ಟಿ ಮಾಡುವಿಕೆ ಮತ್ತು ಇತರೆ ಘೋಷಣೆಗಳ ಅವಶ್ಯಕತೆಗಳು) 33ನೇ ನಿಯಂತ್ರಣದಡಿ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ಫೈಲ್ ಮಾಡಿರುವ ತ್ರೈಮಾಸಿಕ ಫಲಿತಾಂಶಗಳ ವಿವರವಾದ ನಮೂನೆಯ ಸಾರಂಶವಾಗಿದೆ. ತ್ರೈಮಾಸಿಕ ಫಲಿತಾಂಶಗಳ ವಿವರವಾದ ನಮೂನೆಯು ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್ www.bseindia.com ಮತ್ತು www.nseindia.com ಮತ್ತು ಕಂಪನಿಯ ವೆಬ್‌ಸೈಟ್ www.diageoindia.com ನಲ್ಲಿ ಲಭ್ಯವಿರುತ್ತದೆ.

ಬಿ) ಏಕೀಕೃತ ಹಣಕಾಸು ಆಡಿಯಲ್ಲಿ ವರ್ಷದ ಬಾಕಿ ಇರುವ ಈಕ್ವಿಟಿ ಷೇರುಗಳ ಸರಾಸರಿ ಸಂಖ್ಯೆಯನ್ನು ಲೆಕ್ಕಹಾಕುವಲ್ಲಿ, ಕಂಪನಿಯು ಯುಎಸ್ಎಲ್ ಬೆನಿಫಿಟ್ ಟ್ರಸ್ಟ್‌ನಲ್ಲಿ ಹೊಂದಿರುವ (ಕಂಪೆನಿಯ ಏಕೈಕ ಫಲಾನುಭವಿಯಾಗಿರುವ) ಸ್ವಂತ ಷೇರುಗಳನ್ನು ಕಡಿಮೆ ಮಾಡಿದೆ.

ನಿರ್ದೇಶಕರ ಮಂಡಳಿಯ ನಿಮಿತ್ತ ಮತ್ತು ಅವರ ಪರವಾಗಿ
ಸಹಿ/-
ಹಿನಾ ನಾಗರಾಜನ್
ವ್ಯವಸ್ಥಾಪಕ ನಿರ್ದೇಶಕರು ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ

ಸ್ಥಳ : ಬೆಂಗಳೂರು
ದಿನಾಂಕ : ಜನವರಿ 23, 2024